Regd No M 1299 SATYAVADI Founded 1917
The Oldest Newspaper of Mysore

ಸತ್ಯವಾದಿ

ರಾಷ್ಟ್ರೀಯ ವಾರ್ತಾಪತ್ರಿಕೆ
(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 31 ಸಂಚಿಕೆ 156] [ಸೋಮವಾರ 10—5—48 [ಬಿಡಿ ಪ್ರತಿ 3 ಪೈ

ಯುದ್ಧ ಕಾಲದಲ್ಲಿ ಜರ್ಮನಿಯೊಂದಿಗೆ ಬಿ ಟ್ಸ್ ಅಮೇರಿಕಾದ ಒಳಸಂಚೆ?

ಈ ವಾರದ ಭವಿಷ್ಯ

(ಓಂ ಜೋತಿಷ್ಯರಿಂದ)

ಮೇಷ.... ಪರಿಸ್ಥಿತಿ ಅಸ್ಥಿರ, ಹೆಚ್ಚು ಧನದಾಶೆ ಬೇಡ, ವ್ಯವಹಾರದಲ್ಲಿ ಜಾಗರೂಕತೆ ಅವಶ್ಯ

ವೃಷಭ.... ಸೋಮಾರಿತನ ದೂರ ಗೊಳಿಸಿ ; ಆರ್ಥಿಕ ಲಾಭವುಂಟು

ಮಿಥುನ....ಆರ್ಥಿಕ ಮುಗ್ಗಟ್ಟಿನ ಸ್ಥಿತಿ. ಖರ್ಚು ಹೆಚ್ಚು, ಅನಾರೋಗ್ಯ

ಕರ್ಕಾಟಕ....ಅನಾರೋಗ್ಯ, ಮನೋಭ್ರಮೆ, ಕಾರ್ಯಗಳಲ್ಲಿ ವಿಘ್ನ

ಸಿಂಹ — ಧನಹಾನಿ ಮಾನಹಾನಿ ಕಲಹದ ಭಯ

ಕನ್ಯಾ— ಕೈಗೊಂಡ ಕಾರ್ಯಗಳಲ್ಲಿ ಜಯ, ಧನಲಾಭ

ತುಲ.... ಧನಲಾಭ ಮಿತ್ರರ ಭೇಟಿ ಸನ್ಮಾನ ವ್ಯವಹಾರದಲ್ಲಿ ಜಯ

ವೃಶ್ಚಿಕ—ಆರೋಗ್ಯವುಂಟು ಆರ್ಥಿಕ ಲಾಭವುಂಟು ವ್ಯವಹಾರದಲ್ಲಿ ಪ್ರಗತಿ

ಧನಸ್ಸು — ಆರೋಗ್ಯಕ್ಕೆ ಧಕ್ಕೆ ಶಾಂತತೆ ಇರುವುದಿಲ್ಲ. ಎಚ್ಚರಿಕೆಯಿಂದಿರಬೇಕಾದ ವಾರ

ಮಕರ — ಸಕಲ ವಿಷಯದಲ್ಲೂ [illegible] ಅವರಿಸಿದೆ

[illegible] ಆರೋಗ್ಯ ಉತ್ಸಾಹ [illegible]ವಿರಿ

[illegible]ಚಾರದೊಡನೆ ಕಾರ್ಯ [illegible]ರೊಂದಿಗೆ ಈ ವಾರ ಹೆಚ್ಚಿನ ಜಾಗ್ರತೆಯಿಂದಿರಬೇಡಿ

ನಿಮಿಷಕ್ಕೆ 200 ಮಾತುಗಳು

ನಿಮಿಷಕ್ಕೆ 200 ಮಾತುಗಳಂತೆ ಟೈಪು ಮಾಡುವ ಯಂತ್ರವು ನಿರ್ಮಿಸಲ್ಪಟ್ಟಿದೆ ; ಈ ಯಂತ್ರವು ಯಾವ ಭಾಷೆಯಲ್ಲಿ ಮಾತನಾಡಿದರೂ ಸರಿಯೇ ನಿಮಿಷಕ್ಕೆ 200 ಮಾತುಗಳಂತೆ (ಉಚ್ಚರಣೆಯನ್ನನುಸರಿಸಿ) ಟೈಪುಮಾಡುತ್ತದೆ : ಈ ಟೈಪುಯಂತ್ರವು ಈಗ ಐರ್ಲೆಂಡು ಪಾರ್ಲಿಮೆಂಟಿನಲ್ಲಿಯೂ ಪ್ರಪಂಚ ಸಮಿತಿಯಲ್ಲಿಯೂ ಉಪಯೋಗದಲ್ಲಿದೆ. ಈ ತಿಂಗಳು 8 ರಿಂದ ನಡೆಯುವ ಬ್ರಿಟಿಷ್ ಇಂಡಸ್ಟ್ರೀಸು ಫೇರಿನಲ್ಲಿ ಇದು ಪ್ರದರ್ಶಿಸಲ್ಪಡುತ್ತದೆ

ವೇದಯುಗದಲ್ಲಿ ಕ್ಷಾಮವಿದ್ದಿತೇ?

ವೇದಗಳಲ್ಲಿ ಐತ್ತರೇಯದಲ್ಲಿ ಒಂದು ಕಥೆ ಇದೆ. ಪರೀಕ್ಷಿತ್ತನು ರಾಜ್ಯವಾಳುತ್ತಿದ್ದ ಕಾಲದಲ್ಲಿ ಒಬ್ಬ ಕರ್ಷಕನು ಕೆಲಸಮಾಡಿ ಮನೆಗೆ ಬಂದಾಗ ಆತನ ಹೆಂಡತಿಯು ನೀರು ಕುಡಿಯಲಿಕ್ಕೆ ಕೊಡದೆ 'ದಧಿಮಂತಂ ಪರಿಶೃತಂ' ಅಂದರೆ ಕಡುಗೋಲಿನಿಂದ ಕಡೆದ ಕೆಲವು ಪಾನೀಯಗಳನ್ನು ಸೇರಿದ ಮಜ್ಜಿಗೆಯನ್ನು ಕೊಟ್ಟು ತರುವಾಯ ಈಗ ಬಾರ್ಲಿ ಎಂದು ಪೇಳಲ್ಪಡುವ ಯವೆಗಳ ಗಂಜಿಯನ್ನು ಕುಡಿಯಲು ಕೊಟ್ಟಳೆಂದು ತಿಳಿಸಿದೆ. ಇದರಿಂದ ಆ ಕಾಲದಲ್ಲಿ ಅವರು ಗೋವುಗಳನ್ನು ಎಷ್ಟು ಶ್ರದ್ಧೆಯಿಂದ ನೋಡುತ್ತಿದ್ದರೊ, ಎಷ್ಟು ಧಾನ್ಯ ಸಮೃದ್ಧಿಯುಳ್ಳವರಾಗಿದ್ದರೋ, ಕರ್ಷಕರು ಕೂಡ ಆಹಾರಬಟ್ಟೆಗಳ ವಿಷಯದಲ್ಲಿ ಎಷ್ಟು ಸುಸ್ಥಿತಿಯಲ್ಲಿರುತ್ತಿದ್ದರೋ ಊಹಿಸಬಹುದು.

ಅಶ್ವಪತಿ ಮಹಾರಾಜನು ಏನು ಹೇಳಿರುವನೆಂದರೆ— ನನ್ನ ರಾಜ್ಯದಲ್ಲಿ ಕಳ್ಳರಿಲ್ಲ ಹೆಂಡಕುಡಕರಿಲ್ಲ ಅಂಟು ವ್ಯಾಧಿಗಳಿಲ್ಲ, ಅವಿದ್ವಾಂಸರೂ ಅಗ್ನಿಕಾರ್ಯ ಮಾಡದವರೂ ಆದ ಬ್ರಾಹ್ಮಣರಿಲ್ಲವೆಂದು ಹೇಳಿದ್ದಾನೆ, ದೇಶವು ಸೌಭಾಗ್ಯದಿಂದ ಕೂಡಿತ್ತೆಂಬುದು ಇದರಿಂದ ಸ್ಪಷ್ಟವಾಗುವುದು

——

[illegible]ಚ್ಚಿ,ಮುಟ್ಟಾಗರುವ [illegible] ತಪ್ಪಿಸಲು

ಇಂದಿನ ವರ್ತಮಾನ

ಲಂಡನ್ ಮೆ 9—ಯೂರೋಪಿನಲ್ಲಿನ ವಿಜಯ ಸಮಾರಂಭವನ್ನಾಚರಿಸುತ್ತ ಅಮೇರಿಕಾ ಬ್ರಿಟನ್ ಪೇಲೆ ರಷ್ಯಾ ಅಪಾದನೆ ಸುರಿಮಳೆ ಸುರಿದಿದೆ ಯುದ್ಧ ಕಾಲದಲ್ಲಿ ರಷ್ಯವು ಮೆತ್ತಗಾಗಲೆಂದೇ ಅಮೇರಿಕಶ ಬ್ರಿಟನ್ನು ಕಾಯುತ್ತಿದ್ದ ವೆಂದೂ ನಂತರ ರಷ್ಯವೊಂದೇ ಜರ್ಮನಿಯನ್ನು ಆಕ್ರಮಿಸುವ ಶಕ್ತಿಯಿರುವುದನ್ನು ಕಂಡು ಎರಡನೇ ರಂಗ ತೆರೆದರೆಂದೂ, ಮತ್ತು ಆ ಕಾಲದಲ್ಲಿ ರಹಸ್ಯವಾಗಿ ಜರ್ಮನಿಯೊಂದಿಗೆ ಅವು ಒಪ್ಪಂದ ಮಾಡಿಕೊಳ್ಳುವ ಒಳಸಂಚು ನಡೆಸುತ್ತಿದ್ದ ವೆಂದೂ ರಷ್ಯಾದ ಅಪಾದನೆ

ಂ ಂ

ನವದೆಹಲಿ— ಫ್ರೆಂಚು ಸ್ವಾಸ್ಥ್ಯಗಳು ಭಾರತಕ್ಕೆ ಸೇರಬೇಕೆ ಬೇಡವೇ ಎಂಬ ವಿಷಯದಲ್ಲಿ ರೆಫರೆಂಡಂ ತೆಗೆದುಕೊಳ್ಳಲ್ಪಡುವುದೆಂದು ಹೇಳಲಾಗಿದೆ

ಂ ಂ

ನವದೆಹಲಿ — ಕುರುಕ್ಷೇತ್ರದಲ್ಲಿ ಎರಡು ರೈಲು ಡಿಕ್ಕಿಹೊಡೆದು 13 ಮಂದಿ ಗಾಯಗೊಂಡರು

ಂ ಂ

ಬೊಂಬಾಯಿ— ಭಾವನಗರದ ಗಲಭೆಯಲ್ಲಿ ಇಬ್ಬರು ಸತ್ತು ಹದಿನೆಂಟು ಮಂದಿ ಗಾಯಗೊಂಡರು

ಂ ಂ

ಮದರಾಸು — ಮಾಯಾವರದಲ್ಲಿ ಮುಷ್ಕರ ಹಿಡಿದಿರುವ ರೈಲ್ವೇ ಕೆಲಸಗಾರರ ಸಹಾನುಭೂತಿ ತೋರಿಸಲು ಈ ದಿನ 24 ಗಂಟೆ ಕಾಲ ಎಸ್ ಐ ರೈಲ್ವೆ ಕೆಲಸಗಾರರೆಲ್ಲ ಜನರಲ್ ಸ್ಟ್ರೈಕು ಮಾಡಿದರೆಂದು ಹೇಳಲಾಗಿದೆ

ಂ ಂ

ಮುಂಬೈನಲ್ಲಿ ಮಹಾತ್ಮರ ತ್ರೈಮಾಸಿಕ ಶ್ರಾದ್ಧವು ಆಚರಿಸಲಾಯಿತು; ಬೆಳಿಗ್ಗೆ ನೂಲು ತೆಗೆದರು ಸಂಜೆ ಸಭೆ ನಡೆಸಿದರು.

ಂ ಂ

ರಾಜ್ಯಾಂಗಸಭಾಧಿವೇಶನ

ಬೆಂಗಳೂರು ಮೆ 9 — ಧ್ಯೇಯೋದ್ದೇಶ ನಿರ್ಣಯದ ಬಗ್ಗೆ ತುಂಬಾ ಚರ್ಚೆ ನಡೆಯಿತು — ರಾಜ್ಯಾಂಗ ಶಾಸನದ ತತ್ವ ಬಗ್ಗೆ ವಿಚಾರಮಾಡಿ ವರದಿಮಾಡಬೇಕೆಂಬ ಶ್ರೀ ಹನುಮಂತಯ್ಯನವರ ಸೂಚನೆ ಅಂಗೀಕರಿಸಲಸಯಿತು : ಈ ಸಮಿತಿಗೆ ಚುನಾವಣೆ ಸೋಮವಾರ ನಡೆಯುವುದು

Woodlands ವುಡ್‌ಲ್ಯಾಂಡ್ಸ್

7—5—48 ರಿಂದ — ದಿನವಹಿ 3 ಆಟಗಳು

ಮೂಡರ್ಡ ಥಿಯೇಟರ್ಸ್‌ರವರ ಅತ್ಯಂತ ಸುಂದರ ತಮಿಳು ಚಿತ್ರ

1000 ತಲೈವಾಂಗಿ

ಅಪೂರ್ವ ಚಿಂತಾಮಣಿ

ಭೂಮಿಕೆಯಲ್ಲಿ— ಪಿ. ಎಸ್. ಗೋವಿಂದರ್, ಎಂ. ಆರ್. ಸ್ವಾಮಿನಾಥರ್
ಆರ್. ಬಾಲಸುಬ್ರಮಣ್ಯಂ, ಕಾಳಿ ಎನ್. ರತ್ನಂ. ಟಿ ಎಸ್. ದೊರೈರಾಜ್
ವಿ, ಎನ್. ಜಾನಕಿ, ಎಸ್. ವರಲಕ್ಷ್ಮಿ, ಟಿ ಎಸ್. ರಾಜಾಕಾಂತಂ

Released by— RAJA[illegible]

ತಾ॥ 10-5-48 ॥ಶ್ರೀ॥ ನಂ. 87

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

ಶ್ರುತಿ-ಸ್ಮೃತಿಗಳ ವಿಸ್ತಾರ

(ಲೇ—ಕರಪಾತ್ರೀ ಸ್ವಾಮಿಗಳು)

.... ೧ ....

ತೈತ್ತರೀಯ ಬ್ರಾಹ್ಮಣದಲ್ಲಿ ಒಂದು ಕಥೆ ಇದೆ— ಭರದ್ವಾಜನು ತನ್ನ ಮೂರು ಜೀವನ ಕಾಲ ಅಂದರೆ 300 ವರ್ಷಗಳವರೆಗೆ ಬ್ರಹ್ಮಚರ್ಯವ್ರತದಿಂದಿದ್ದು ವೇದಗಳನ್ನು ಕಲಿಯುತ್ತಲೇ ಇದ್ದನು. ಅತಿ ವೃದ್ಧನಾದಾಗ ಇಂದ್ರನು ಬಂದು ಕೇಳಿದನು—'ನಿನಗೆ ನಾನಿನ್ನೂ ಜೀವನ ಕಾಲ ನೂರು ವರ್ಷದವರೆಗೆ ಆಯುಸ್ಸನ್ನಿತ್ತರೆ. ನೀನು ಏನು ಮಾಡುತ್ತೀ?' ಭರದ್ವಾಜನಂದನು—'ನಾನು ಬ್ರಹ್ಮಚರ್ಯದಿಂದಿದ್ದು ವೇದಾಧ್ಯಯನವನ್ನೇ ಮಾಡುವೆನು.' ಬಳಿಕ ಇಂದ್ರನು ಮೂರು ಪರ್ವತಗಳನ್ನು ಭರದ್ವಾಜನಿಗೆ ತೋರಿಸಿ, ಆದರ ಮೂರು ಮುಷ್ಟಿಯು ವರ್ಣನ್ನು ತೆಗೆದು ಹೇಳಿದನು—'ನೋಡು, ಈ ಮೂರು ಪರ್ವತ ಮೂರು ವೇದಗಳು; ನೀನು ನಿನ್ನ ಮೂರು ಜೀವನ ಕಾಲ ೩೦೦ ವರ್ಷಗಳಲ್ಲಿ ಈ ಮೂರು ಮುಷ್ಟಿಯಷ್ಟನ್ನು ಮಾತ್ರ ಕಲಿತಿ, ಇನ್ನೂ ಬಾಕಿ ಈ ಮೂರು ಪರ್ವತಗಳಷ್ಟು ಉಳಿದಿವೆ—' ಆನಂತಾವೈ ವೇದಾಃ | ಪತದ್ವಾ ಏತೈಸ್ತ್ರಿಭಿರಾಯುರ್ಭಿರನ್ವವೋಚಥಾ | (ತೈ. ಬ್ರಾ. ೩)

ಮುಕ್ತರೋಪನಿಷತ್ತಿನಲ್ಲಿ ಬೀಗೆ ಹೇಳಿದೆ— ಋಗ್ವೇದದಲ್ಲಿ ೧೧ ಶಾಖೆ, ಯಜುರ್ವೇದದಲ್ಲಿ ೧೦೯, ಸಾಮವೇದದಲ್ಲಿ ೧೦೦೦, ಅಥರ್ವವೇದದಲ್ಲಿ ೫೦ ಶಾಖೆಗಳಿವೆ. ಪ್ರತಿಯೊಂದು ಶಾಖೆಯಲ್ಲಿಯೂ ಒಂದೊಂದು ಉಪನಿಷತ್ತಿದೆ.

ಭಾಗವತದ ೧೨ ನೇ ಸ್ಕಂದದಲ್ಲಿಯೂ ಹೇಳಿದೆ— ಬ್ರಹ್ಮನ ಹೃದಯಾಕಾಶದಿಂದ ನಾದ (ಅವ್ಯಕ್ತಶಬ್ದ) ವುಂಟಾಯಿತು. ಕಿವಿ ಮುಚ್ಚಿಕೊಂಡಾಗ ಇದು ಕೇಳಿಸುತ್ತದೆ. ಇದರ ಉಪಾಸನೆಯಿಂದ ಯೋಗಿಗಳು ದೋಷಗಳನ್ನು ನಾಶಗೊಳಿಸಿಕೊಂಡು ಮುಕ್ತರಾಗುತ್ತಾರೆ ಆ ನಾದದಿಂದ ಪರಮಾತ್ಮನ ಸಾಕ್ಷಾತ್ ಬೋಧಕವಾದ ಓಂಕಾರವು ಉಂಟಾಯಿತು. ಓಂಕಾರದ ಅ, ಉ, ಮ, ಈ ಮೂರು ಅಕ್ಷರಗಳಲ್ಲಿ ಸತ್ವ-ರಜ-ತಮ-ಋಗ್ವೇದ-ಯಜುರ್ವೇದ-ಸಾಮವೇದ, ಭೂರ್ಭುವಸುವರ್ಲೋಕ, ಜಾಗ್ರತ್ಸ್ವಪ್ನಸುಷುಪ್ತಿಗಳು ಉಂಟಾದವು. ಅನಂತರ ಬ್ರಹ್ಮನು ವರ್ಣಮಾಲೆಯನ್ನು ಸೃಜಿಸಿದನು. ಯಜ್ಞಗಳ ವಿಸ್ತಾರಕ್ಕಾಗಿ ಸಪ್ತವ್ಯಾಹೃತಿಗಳನ್ನೂ, ವೇದಗಳನ್ನೂ ಪ್ರಕಟಿಸಿದನು. ಮರೀಚ್ಯಾದಿ ಋಷಿಗಳಿಗೆ ವೇದವನ್ನು ಕಲಿಸಿದನು. ಅವರು ತಮ್ಮ ಪುತ್ರರಿಗೂ ಶಿಷ್ಯರಿಗೂ ಕಲಿಸಿದರು. ಹೀಗೆ ಶಿಷ್ಯ ಪರಂಪರೆಯಿಂದ ನಾಲ್ಕು ಯುಗಗಳಲ್ಲಿ ವೇದಗಳ ಪ್ರಚಾರವಾಯಿತು.

ಕಲಿಗಾಲದ ಜೀವನ ಅಲ್ಪಾಯುವನ್ನು ಗಮನಿಸಿ, ಪರಮೇಶ್ವರನ ಪ್ರೇರಣೆಯಿಂದ ದ್ವಾಪರ ಯುಗದಲ್ಲಿ ವ್ಯಾಸರು ವೇದಗಳನ್ನು ವಿಭಾಗಿಸಿಟ್ಟರು ಹೇಗೆ ರತ್ನಪರೀಕ್ಷಕನು ಅನೇಕ ರತ್ನಗಳ ರಾಶಿಯಿಂದ ವಜ್ರವೈಢೂರ್ಯಾದಿ ರತ್ನಗಳನ್ನು ಆರಿಸಿ ಆರಿಸಿ, ಒಂದೊಂದು ಜಾತಿಯ ರತ್ನಗಳ ರಾಶಿಯನ್ನು ಬೇರೆಮಾಡುತ್ತಾನೆಯೋ, ಹಾಗೆಯೇ ವೇದಗಳಲ್ಲಿ ಆಯಾಯ ಸ್ಥಾನಗಳಲ್ಲಿ ಪಠಿತವಾಗಿರುವ ಋಕ್-ಯ ಜು-ಸಾಮ-ಅಥರ್ವ ನಾಮಕವಾದ ಮಂತ್ರಗಳನ್ನು ಒಂದುಗೂಡಿಸಿ ವ್ಯಾಸರು ನಾಲ್ಕು ತರಹದ ಸಂಹಿತೆಗಳನ್ನು ಮಾಡಿದರು, ಮತ್ತು ಶಿಷ್ಯರಾದ ಪೈಲನಿಗೆ ಬಹ್ವೃಚ' ಎಂಬ ಋಕ್ಸಂಹಿತೆಯನ್ನೂ, ವೈಶಂಪಾಯನನಿಗೆ ನಿಗದ ವೆಂಬ ಯಜುಸ್ಸಂಹಿತೆಯನ್ನೂ ಛಂದೋಗವೆಂಬ ಸಾಮಸ[illegible] ಮುನಿಗೂ, ಅ[illegible] ಥರ್ವ ಸಂ[illegible] ಕೊಟ[illegible]

— ೨ —

ಚರಣವ್ಯೂಹದ ಮಹಿದಾಸ ವೃತ್ತಿಯಲ್ಲಿ ಎತ್ತಿರುವ ವಿಷ್ಣು ಪುರಾಣದ ವಚನಗಳಿಂದ ತಿಳಿದುಬರುವುದೇನೆಂದರೆ— ವಿಭಾಗಕ್ಕಿಂತ ಮುಂಚೆ ಸಿಕ್ಕಿರುವ ಋಗ್ವೇದಾದಿಗಳ ಸಮೂಹವು ಅನಂತ ಸಂಖ್ಯೆವುಳ್ಳ ಒಂದೇ ಆಗಿದ್ದಿತು—' ಆದ್ಯೋ ವೇದಶ್ಚತುಷ್ಪಾದಃ ಶತಸಾಹಸ್ರಸಮ್ಮಿತಃ ಶತೋದಶಗುಣಃ ಕೃತ್ಸ್ನೋ ಯಜ್ಞೋ ಯಂ ಸರ್ವಕಾಮಧುಗ್ಭಿಕ್ ॥'

ಬ್ರಹ್ಮನು ಪ್ರಜೆಗಳ ಸೃಷ್ಟಿಯನಂತರ ಧರ್ಮ, ಅರ್ಥ, ಕಾಮುಕ್ಯಾಗಿ ವೇದದ ತಾತ್ಪರ್ಯಗಳನ್ನು ಸಂಕ್ಷೇಪಿಸಿ, ಎಲ್ಲಾ ಧರ್ಮಶಾಸ್ತ್ರಗಳಿಗಿಂತ ಮುಂಚೆ ಲಕ್ಷಾಧ್ಯಾಯಗಳ ಲಕ್ಷಾಧ್ಯಾಯೀ ಸ್ಮೃತಿಯನ್ನು ಮಾಡಿದನು—' ತ್ರಿವರ್ಗಸ್ಯಾ ಸಾಧಗಮಧ್ಯಾಯಾನಾಂ ಶತಸಹಸ್ರೇಣೂಗ್ರೇ ಪ್ರೇವಾಚ ॥ (ಕಾ.ಸೂ) ಅದರಿಂದ ಧರ್ಮಸಂಬಂಧವಾದ ಅಂಶಗಳನ್ನು ಒಂದುಗೂಡಿಸಿ, ಸ್ವಾಯಂಭುವ ಮನುವು ಬೇರೆ ಸ್ಮೃತಿಯನ್ನು ಮಾಡಿದನು. ಬೃಹಸ್ಪತಿಯು ಅದರಿಂದಲೇ ಅರ್ಥಶಾಸ್ತ್ರವನ್ನು ಮಾಡಿದನು; ನಂದಿಯು ಅದರಿಂದಲೇ ಕಾಮಶಾಸ್ತ್ರವನ್ನು ರಚಿಸಿದನು. (ಕಾ. ಸೂ).

ಮನುವೂ ಹೇಳುತ್ತಾನೆ—' ಇದಂ ಶಾಸ್ತ್ರಂ ತು ಕೃತ್ವಾಸೌ ಮಾಮೇವಸ್ವಯಮಾಡಿತಃ | ವಿಧಿವದ್ಗ್ರಾಹಯಂ ಮಾನ ಮರೀಚ್ಯಾದೀಂಸ್ತ್ವಹಮುನೀನ್ ॥' ಅಂದರೆ ಈ ಶಾಸ್ತ್ರವನ್ನು ಮಾಡಿ ಬ್ರಹ್ಮನು ನನಗೆ ಕಲಿಸಿದನು, ನಾನು ಮುನಿಗಳಿಗಿತ್ತೆನು. ಆ ಚಾರಕಾಂಡೀಯ ಪರಾಶರ ವಾಕ್ಯದಿಂದಲೂ ಇದೇ ವಿಷಯವು ಸಿದ್ಧವಾಗುತ್ತದೆ. [ಮುಂದುವರಿಯುವುದು

——

ಶ್ರೀ ದ್ವಾರಕಾ ಜಗದ್ಗುರುಗಳವರು

ನುಳ್ಳಾಗಲಿಗೆ ದಯಮಾಡಿಸಿದರು.

— ....

(ಸ್ವಂ. ಸು. ತಂತಿ)

ತೀರ್ಥಹಳ್ಳಿ ಮೆ 6

ಶ್ರೀ ದ್ವಾರಕಾ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ಸ್ವಾಮಿ ಮಹಾರಾಜರವರು, ಭೀಮಾಶಂಕರಕ್ಕೆ ಭೇಟಿ ಕೊಟ್ಟು, ಪೂನಾ, ಕೊಲ್ಲಾಪುರ, ಹುಬ್ಬಿ ಮಾರ್ಗವಾಗಿ ನಿನ್ನೆ ಸಂಜೆ ಮುಳ್ಳಾಗಲಿಗೆ ದಯಮಾಡಿಸಿದರು. ಅಧಿಕಾರಿಗಳೂ ಸಾರ್ವಜನಿಕರೂ ಭಕ್ತಿವಿಶ[illegible] ಪೂರ್ವಕವಾಗಿ ಸುಸ್ವಾಗತ [illegible] ಶ್ರೀ ಶಂಕರಜಯಂತ್ಯುತ್ಸವ[illegible] ರಿಂದ 13 ರವರೆಗೆ ಅತಿ ವೈ[illegible] ವೇರಿಸಲಾಗುವುದು

ಪ್ರಭಾ

ಪ್ರಭಾತ್ ರವರ .... ಅಮೋಘ 2 ನೇ ವಾರ

ಹಂ - ಏಕ್ - ಹೈ

(ಹಿಂದಿ)

ಭೂಮಿಕೆ— ರೆಹನಾ, ದುರ್ಗಾ ಖೋಟೆ, ಕಮಲಾ ಕೋಟ್ನಿಸ್

ಬೇಗನೆ ಬರಲಿದೆ— 'ಕಿಡಕಿ' (ಹಿಂದಿ)

At Opera
From 6-5-48
Jungle Girl
A Republic serial
[illegible] Chapters

Save the Cow

ಗೋ ವಧೆ ನಿಲ್ಲಲಿ

Edited, Printed and Published by M S Krishna Rao at the [illegible]vadi Press, Chamara